Literacy for a Billion

Movie: Premayana
Year: 1978

Song: Olavininda Omme Naanu
Lyricist: Doddarange Gowda

ಆ... ಆಹಾಹಾ
ಒಲವಿನಿಂದ ಒಮ್ಮೆ ನಾನು
ನಗೆಯ ಕಂಡೆನು
ಅಂದಿನಿಂದ ಇಂದಿನವರೆಗೂ
ನಗುತ ನಗುತ ನಿಂತೆನು
ಒಲವಿನಿಂದ ಒಮ್ಮೆ ನಾನು
ನಗೆಯ ಕಂಡೆನು

ತುಂಟ ನೋಟ ತಮಾಷೆ ಮಾತು
ಅಂತರಂಗವ ಕಲಕಿವೆ
ಕಿಣಕೋ ಧಾಟಿ ಹುಡುಗು ರೀತಿ
ಕೀಟಲೆ ಅರ್ಥವ ತಿಳಿಸಿವೆ
ಹಾಡುವ ಹರೆಯ ಮೋಜಿನ ನಡಿಗೆ
ಮನವ ತುಂಬಿವೆ
ಮನವ ತುಂಬಿವೆ
ಒಲವಿನಿಂದ ಒಮ್ಮೆ ನಾನು
ನಗೆಯ ಕಂಡೆನು

ಸುಮ್ಮನೆ ಕುಳಿತರು ಎದೆಯ ಮಿಡಿತ
ನಿನ ಕೂಗಿ ಕರೆದಿದೆ
ಒಳಗೆ ಮಾತು ಹೊರಗೆ ಮೌನ
ನೂರು ಕನಸು ಕಂಡಿದೆ
ನೋಡುವ ನೋಟ ಮೋಡಿಯ ಮಾಡಿ
ಸನಿಹ ತಂದಿದೆ
ಸನಿಹ ತಂದಿದೆ
ಒಲವಿನಿಂದ ಒಮ್ಮೆ ನಾನು
ನಗೆಯ ಕಂಡೆನು

ನನ ನಿನ ಸಂಗವ ನೋಡಿ
ಕಾಲವು ನಿಂತು ಹಾಡಿದೆ
ನಿನ ತೋಳಲಿ ಸುಖವ ಕಂಡು
ಇಹವೆ ಸ್ವರ್ಗವು ಆಗಿದೆ
ಎಂದೂ ಹೀಗೆ ಇರುವ ಹಾಗೆ
ಬಯಕೆ ಮೂಡಿದೆ
ಬಯಕೆ ಮೂಡಿದೆ
ಒಲವಿನಿಂದ ಒಮ್ಮೆ ನಾನು
ನಗೆಯ ಕಂಡೆನು
ಅಂದಿನಿಂದ ಇಂದಿನವರೆಗೂ
ನಗುತ ನಗುತ ನಿಂತೆನು
ನಗುತ ನಗುತ ನಿಂತೆನು ಹಹಹ
ನಗುತ ನಗುತ ನಿಂತೆನು ಹಹಹ ಹಹಹ

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.